# ತುಮಕೂರು ವಿಶ್ವವಿದ್ಯಾನಿಲಯ

# ರಾಷ್ಟ್ರೀಯ ಸೇವಾ ಯೋಜನೆ

**ವಿಶ್ವವಿದ್ಯಾನಿಲಯ ಕಾರ್ಯಾಲಯ, ಬಿ.ಎಚ್. ರಸ್ತೆ, ತುಮಕೂರು–572 103**

---

**ಕೊಡಗು ಜಿಲ್ಲಾ ನೆರೆ ಸಂತ್ರಸ್ತರಿಗೆ ಸಂಗ್ರಹಿಸಿದ ನಿಧಿಯನ್ನು ಮುಖ್ಯಮಂತ್ರಿಗಳ ಪರಿಹಾರ ನಿಧಿ ಪ್ರಕೃತಿ ವಿಕೋಪ–2018**

***ದಿನಾಂಕ 20ನೇ ಆಗಸ್ಟ್ 2018,*** ***ತುಮಕೂರು ವಿಶ್ವವಿದ್ಯಾನಿಲಯ***

**ಡಾ.ಲೋಕೇಶ ಎಂ.ಯು**

**ಕಾರ್ಯಕ್ರಮಸಂಯೋಜನಾಧಿಕಾರಿಗಳು**

**ರಾಷ್ಟ್ರೀಯ ಸೇವಾ ಯೋಜನೆ**

ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

# ತುಮಕೂರು ವಿಶ್ವವಿದ್ಯಾನಿಲಯ

## ರಾಷ್ಟ್ರೀಯ ಸೇವಾ ಯೋಜನೆ

ವಿಶ್ವವಿದ್ಯಾನಿಲಯ ಆವರಣ, ಬಿ.ಎಚ್. ರಸ್ತೆ, ತುಮಕೂರು-572 103

## ಕೊಡಗು ಜಿಲ್ಲಾ ನೆರೆ ಸಂತ್ರಸ್ತರಿಗೆ ಸಂಗ್ರಹಿಸಿದ ನಿಧಿಯನ್ನು ಮುಖ್ಯಮಂತ್ರಿಗಳ ಪರಿಹಾರ ನಿಧಿ ಪ್ರಕೃತಿ ವಿಕೋಪ-2018ಕ್ಕೆ ಸಲ್ಲಿಸಿರುವ ಕುರಿತು ಸಂಕ್ಷಿಪ್ತ ವರದಿ

ತುಮಕೂರು ವಿಶ್ವವಿದ್ಯಾನಿಲಯದ ರಾಷ್ಟ್ರೀಯ ಸೇವಾ ಯೋಜನೆ ವಿಭಾಗವು ಕೊಡಗು ಜಿಲ್ಲೆಯಲ್ಲಿ ಇತ್ತೀಚೆಗೆ ಸುರಿದ ಭಾರಿ ಮಳೆಯಿಂದಾಗಿ ವಿಕೋಪಕ್ಕೆ ತುತ್ತಾಗಿ ಸಂತ್ರಸ್ತರಾಗಿರುವ ಜನರಿಗೆ ನೆರವಾಗಲೆಂದು ದಿನಾಂಕ:20.08.2018ರಂದು ತುಮಕೂರು ವಿಶ್ವವಿದ್ಯಾನಿಲಯದ ರಾಷ್ಟ್ರೀಯ ಸೇವಾ ಯೋಜನೆಯ ಸ್ವಯಂಸೇವಕರು, ವಿಶ್ವವಿದ್ಯಾನಿಲಯದ ವಿಜ್ಞಾನ ಮತ್ತು ಕಲಾ ಕಾಲೇಜು, ರೆಡ್‌ಕ್ರಾಸ್ ಘಟಕದ ಎಲ್ಲಾ ಸ್ನಾತಕೋತ್ತರ ವಿದ್ಯಾರ್ಥಿಗಳು, ಅಧ್ಯಾಪಕರು, ಅಧ್ಯಾಪಕೇತರು ಹಾಗೂ ಸಂಯೋಜಿತ ಕಾಲೇಜುಗಳ ಎನ್. ಎಸ್.ಎಸ್ ಘಟಕಗಳ ಸಹಯೋಗದೊಂದಿಗೆ ಪರಿಹಾರ ನಿಧಿಗಾಗಿ ವಿಶೇಷ ಅಭಿಯಾನವನ್ನು ಆಯೋಜಿಸಲಾಗಿತ್ತು.

ಸದರಿ ಅಭಿಯಾನದಿಂದಾಗಿ ಜೀವಪರವಾದ ಕಳಕಳಿಯುಳ್ಳ ತುಮಕೂರು ವಿಶ್ವವಿದ್ಯಾನಿಲಯದ ಅಧ್ಯಾಪಕರು, ಅಧ್ಯಾಪಕೇತರು, ವಿದ್ಯಾರ್ಥಿಗಳು ಮತ್ತು ಸ್ವಯಂ ಆಸಕ್ತಿಯಿರುವ ನಾಗರಿಕರು ಉದಾರವಾಗಿ ಧನ ಸಹಾಯ ನೀಡಿದ್ದರಿಂದಾಗಿ ರೂ. 2,43,540-00ಗಳ ಹಣ ಸಂಗ್ರಹಿಸಲಾಯಿತು. ಸದರಿ ಸಂಗ್ರಹಿಸಿದ ನಿಧಿಯನ್ನು ಮಾನ್ಯ ಕುಲಸಚಿವರ ಆಡಳಿತಾತ್ಮಕ ಅನುಮತಿಯನ್ನು ಪಡೆದು ಡಿ.ಡಿ ಮುಖಾಂತರ (ಡಿ.ಡಿ.ಸಂ:351213./ದಿನಾಂಕ:21.08.2018) ಕೊಡಗು ಜಿಲ್ಲೆಯ ಜನರ ಪುನರ್ವಸತಿಗಾಗಿ **ಮಾನ್ಯ ಮುಖ್ಯಮಂತ್ರಿಗಳ ಪರಿಹಾರ ನಿಧಿ ಪ್ರಕೃತಿ ವಿಕೋಪ-2018ಕ್ಕೆ** ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮ ಸಂಯೋಜನಾಧಿಕಾರಿಗಳಾದ ಡಾ.ಲೋಕೇಶ್ ಎಂ.ಯು.ರವರು  ತುಮಕೂರು ವಿಶ್ವವಿದ್ಯಾನಿಲಯದ ಮಾನ್ಯ ಕುಲಪತಿಗಳಾದ ಪ್ರೊ.ವೈ.ಎಸ್.ಸಿದ್ದೇಗೌಡ ರವರೊಂದಿಗೆ ಶ್ರೀ ಜಿ.ಟಿ.ದೇವೆಗೌಡ, ಮಾನ್ಯ ಉನ್ನತ ಶಿಕ್ಷಣ ಸಚಿವರು, ಕರ್ನಾಟಕ ಸರ್ಕಾರ ಇವರ ಮೂಲಕ ಸಲ್ಲಿಸಿದರು. ನಂತರ ಸದರಿ ಮೊತ್ತದೊಂದಿಗೆ ಸುದ್ದಿ ಟಿವಿ ಮುಖೇನಾ ಹಲವಾರು ಅಗತ್ಯ ಸಮಾಗ್ರಿಗಳನ್ನು ಸಹ ಕಳುಹಿಸಿಕೊಡುವ ಮೂಲಕ ಸಂತ್ರಸ್ತರ ಪುರ್ನವಸತಿಗೆ ತುಮಕುರು ವಿಶ್ವವಿದ್ಯಾನಿಲಯವು ಮಾನವೀಯತೆಯ ಸಹಾಯಸ್ತ ನೀಡಿತು.